ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ ೧೭ನೇ ಸೆಪ್ಟೆಂಬರ್ ೧೯೯೧, ಭಾದ್ರಪದ ೨೬, ಶಕ ೧೯೧೩

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೫ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು

ಹುಟ್ಟು ಹಬ್ಬದ ಶುಭಾಶಯಗಳು

ಅಧ್ಯಕ್ಷರು : ಶ್ರೀ ಇದಿನಬ್ಬ ಅವರೆ ಇಂದು ನಿಮ್ಮ 72ನೇ ವರ್ಷದ ಜನ್ಮದಿನ ನನ್ನ ಪರವಾಗಿ ಮತ್ತು ಈ ಸಭೆಯ ಪರವಾಗಿ ನಿಮಗೆ ಹಾರ್ದಿಕವಾದಂಥ ಶುಭಾಶಯಗಳು.

ಚುಕ್ಕೆ ಗುರುತಿನ ಪ್ರಶ್ನೋತ್ತರಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ.ಕೆ. ಅನಂತಕೃಷ್ಣ ಅವರೇ,

3386.

ಅಧ್ಯಕ್ಷರು : ತಮ್ಮ ಪ್ರಶ್ನೆಗೆ ಒಂದು ವಾರ ಟೈಮ್ ಕೇಳಿದ್ದಾರೆ

ಶ್ರೀ ಎ.ಕೆ. ಅನಂತಕೃಷ್ಣ : ಒಂದು ವಾರವಾದರೆ ಅಸೆಂಬ್ಲಿ ಮುಗಿದು ಹೋಗುತ್ತದೆ ಈ ಪ್ರಶ್ನೆಗೆ ಅಂಥ ಇನಿಫಾರ್‌ಮೇಷನ್ ಏನೂ ಕೇಳುವಂತಾದ್ದು ಇಲ್ಲ, ಬರೀ ಗಮನ ಸೆಳಿಯುವಂತ ಮಾತು.

ಅಧ್ಯಕ್ಷರು : ಅನಧಿಕೃತ ನಿರ್ಮಾಣ ಎಂದು ಇದೆ.

ಶ್ರೀ ಎ.ಕೆ. ಅನಂತಕೃಷ್ಣ : ನಾನು ಯಾವುದೇ ಇನ್‌ಫರ್‌ಮೇಷನ್ ಕೇಳಿಲ್ಲ ಸ್ಟಾಟಿಸ್ಟಿಕ್ಸ್ ಕೇಳಿಲ್ಲ ಸ್ಪೆಸಿಫಿಕ್ಕಾಗಿ ಒಬ್ಬರ ಮೇಲೆ ಆಪಾದನೆ ಮಾಡಿರುವುದರ ಬಗ್ಗೆ ಕೂಡ ಕೇಳಿಲ್ಲ,

ಅಧ್ಯಕ್ಷರು : ನೋಡೋಣ

ರಾಜ್ಯದ ಹೆದ್ದಾರಿ ದರೋಡೆಗಳು

3160 - ಶ್ರೀಮತಿ ಸುಮಾವಸಂತ (ವಿರಾಜಪೇಟೆ): ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೆಲವು ತಿಂಗಳಿಂದ ರಾಜ್ಯ ಹೆದ್ದಾರಿಗಳ ದರೋಡೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ಹಾಗೂ ಇದನ್ನು ನಿಯಂತ್ರಿಸಲು ತೆಗೆದುಕೊಂಡು ಕ್ರಮವೇನು?

ಇ) *ಕಳೆದ 3 ತಿಂಗಳಿಂದ ಇಂತಹ ಎಷ್ಟು ಪ್ರಕರಣಗಳು ಯಾವ ಯಾವ ರಾಜ್ಯ ಹೆದ್ದಾರಿಗಳಲ್ಲಿ ನಡೆದಿವೆ?*

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):

ಅ) ಹೆಚ್ಚಾಗುವುದಿಲ್ಲ

ಆ) ಉದ್ಭವಿಸುವುದಿಲ್ಲ

ಹೆದ್ದಾರಿ ದರೋಡೆಗಳನ್ನು ನಿಯಂತ್ರಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1) ಪೋಲೀಸ್‌ನವರ ಸಾರಿಗೆ ಮತ್ತು ಸಂಪರ್ಕವನ್ನು ಉತ್ತಮಗೊಳಿಸಿದೆ.
2) ರಾತ್ರಿ ವೇಳೆಯಾದಿಯಾಗಿ ಹೆದ್ದಾರಿ ಗಸ್ತುಗಳನ್ನು ಮಾಡಲಾಗುತ್ತಿದೆ.
3) ದರೋಡೆ ನಡೆಯಬಹುದೆಂದು ಶಂಕಿಸಲಾದ ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ಚಲಿಸುವ ನಾಲ್ಕು ಚಕ್ರ ವಾಹನಗಳನ್ನು ಗುಂಪು ಮಾಡಿ ಪೋಲೀಸ್ ರಕ್ಷಣೆಯಲ್ಲಿ ಕಳುಹಿಸಲಾಗುತ್ತಿದೆ.
4) ವರ್ತಮಾನ ಪಡೆಯಲು ಹೆದ್ದಾರಿಯ ಮುಖ್ಯವಾದ ಸ್ಥಳಗಳಲ್ಲಿ ಹಾಗೂ ಅಡಗು ಸ್ಥಳಗಳಲ್ಲಿ ಗುಪ್ತ ಪೋಸೀಸ್ ಹೊಂಚು ಏರ್ಪಡಿಸಿದೆ.
5) ಅಪರಾಧ ಪತ್ತೆ ದಳದವರಿಂದ ದರೋಡೆ ನಿರೋಧದಳಗಳನ್ನು ಏರ್ಪಡಿಸಿ ದರೋಡೆ ಪ್ರಕರಣಗಳ ಪತ್ತೆಗೆ ಕ್ರಮ ಕೈಗೊಂಡಿದೆ.
6) ಎಲ್ಲಾ ಹಂತದ ಪೋಲೀಸ್ ಅಧಿಕಾರಿಗಳಿಂದ ಸರಹದ್ದು ಸಭೆಗಳನ್ನು ಏರ್ಪಡಿಸಿ ಅಪರಾಧಗಳ ವಿಷಯ ವಿನಿಮಯ ಮಾಡಿಕೊಂಡಿದೆ.
7) ಪೋಲೀಸ್ ಅಧಿಕಾರಿಗಳ ಶೀಘ್ರ ಕಾರ್ಯಚರಣೆ ಸಲುವಾಗಿ ಕಂಟ್ರೋಲ್ ರೂಂಗಳನ್ನು ಜಾಗ್ರತಿಗೊಳಿಸಿದೆ.

ಇ) 14 ಪ್ರಕರಣಗಳು ಈ ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

ಕ್ರ ಸಂ	*ಸಂಭವಿಸಿದ ಸ್ಥಳ*	*ಪೋಲೀಸ್ ಠಾಣೆ ಹೆಸರು*	*ಅಪರಾಧ ಸಂಖ್ಯೆ*
1.	**ರಾಯಚೂರು ಜಿಲ್ಲೆ**		
	ಹಡಭಾಳ ಗ್ರಾಮ ಸಿಂಧೂನೂರು-ಹಳೆ ಬಳ್ಳಾರಿ ರಸ್ತೆಯಿಂದ 7.ಕಿ.ಮೀ	ಸಿಂಧನೂರು	217.91
2.	**ಚಿತ್ರದುರ್ಗ ಜಿಲ್ಲೆ**		
	ಹಿರೇಹಳ್ಳಿ ಗ್ರಾಮ ಚಳ್ಳಕೇರೆ ಬಳ್ಳಾರಿ ರಸ್ತೆ 6 ಕಿ.ಮೀ.	ಥಳಕ್	88.91
3.	**ಉತ್ತರ ಕನ್ನಡ ಜಿಲ್ಲೆ**		
	ಕೊಡಗೆ ಜಂಗಲ್ ಹತ್ತಿರ ಕಾರವಾರ ಕೈಗಾ ರಸ್ತೆ	ಮಲ್ಲಾಪುರ	25.91

4.	**ಕೋಲಾರ ಜಿಲ್ಲೆ** ಸೋಮಘಟ್ಟ ಗ್ರಾಮದ ಹತ್ತಿರ ಜಿಲಗರ ಹಳ್ಳಿ ಉತ್ತರ ಬಾಗೇಪಲ್ಲಿ 12. ಕಿ.ಮೀ.	ಬಾಗೇಪಲ್ಲಿ	91.91
5.	**ಕೋಲಾರ ಜಿಲ್ಲೆ** ಸೋಮಘಟ್ಟ ಕ್ರಾಸ್ ಹತ್ತಿರ ಬಾಗೇಪಳ್ಳಿಯಿಂದ 15 ಕಿ.ಮೀ.	ಬಾಗೇಪಲ್ಲಿ	85.91
6.	**ಬಳ್ಳಾರಿ ಜಿಲ್ಲೆ** ಹಗರಿ ಗುಂತಕಲ್ಲು ರಸ್ತೆ ಕೆ.ವೀರಾಪುರ ಗ್ರಾಮದ ಹತ್ತಿರ	ಬಳ್ಳಾರಿ ಗ್ರಾಮಾಂತರ	214.91
7.	ಬಳ್ಳಾರಿ ಗುಂತಕಲ್ ರಸ್ತೆ ಚಳ್ಳಗುರ್ಕಿ ಗ್ರಾಮದ ಹತ್ತಿರ	ಬಳ್ಳಾರಿ ಗ್ರಾಮಾಂತರ	216.91
8.	**ಬಿಜಾಪುರ ಜಿಲ್ಲೆ** ಸೋಲಾಪುರ ಹುಬ್ಬಳ್ಳಿ ರಸ್ತೆ ಹುಲಗೇರಿ ಗ್ರಾಮದ ಹತ್ತಿರ	ಕೆರೂರು	70.91
9.	**ತುಮಕೂರು ಜಿಲ್ಲೆ** ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4 ದೇವರಹಳ್ಳಿ ಗೇಟ್ ಹತ್ತಿರ	ತಾವರೆಕೆರೆ	49.91
10.	**ಕೋಲಾರ ಜಿಲ್ಲೆ** ಮುಡಕೆರೆ ಕ್ರಾಸ್	ಚಿಂತಾಮಣಿ ಗ್ರಾಮಾಂತರ	114.91
11.	**ಮುಡಕೆರೆ ಕ್ರಾಸ್**	ಚಿಂತಾಮಣಿ ಗ್ರಾಮಾಂತರ	141.91
12.	**ಬೆಂಗಳೂರು ಜಿಲ್ಲೆ** ಚಿಕ್ಕಗೌಡನ ದೊಡ್ಡಿಯ ಕಳೀಗೌಡ ದೊಡ್ಡಿಯ ಹತ್ತಿರ	ಕನಕಪುರ	151.91
13.	**ಕಗ್ಗನೂರು ಹೊಸೂರು ರಸ್ತೆ**	ಸರ್ಜಾಪುರ	24.91
14.	**ಹೊಸಕೋಟೆ ಮಾಲೂರು ರಸ್ತೆ**	ಹೊಸಕೋಟೆ	258.91

ಶ್ರೀಮತಿ ಮೋಟಮ್ಮ (ಶ್ರೀ ಮತಿ ಸುಮ ವಸಂತ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೆ ಅವರ ಪ್ರಶ್ನೆ ಹೀಗಿದೆ. ಕೆಲವು ತಿಂಗಳುಗಳಿಂದ ರಾಜ್ಯದ ಹೆದ್ದಾರಿಗಳಲ್ಲಿ ದರೋಡೆಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರು ಅದಕ್ಕೇನು ಉತ್ತರವಿಲ್ಲ. ಆದರೆ ದರೋಡೆಗಳು ಹೆಚ್ಚಾಗಿರುವುದಿಲ್ಲವೆಂದು ಹೇಳಿದ್ದಾರೆ. ಹಾಗಿದ್ದಲ್ಲಿ ಇದಕ್ಕೆ ಕಾರಣವೇನು? ಹಾಗೂ ಇದನ್ನು ನಿಯಂತ್ರಿಸಲು

ತೆಗೆದುಕೊಂಡ ಕ್ರಮವೇನು ಎಂಬ ಪ್ರಶ್ನೆಗೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ನಂತರ ಮೂರನೆಯದಾಗಿ ಕಳೆದ ಮೂರು ತಿಂಗಳಿಂದ ಎಷ್ಟು ಪ್ರಕರಣಗಳು ಯಾವ ಯಾವ ಹೆದ್ದಾರಿಗಳಲ್ಲಿ ನಡೆದಿದೆ ಎನ್ನುವುದಕ್ಕೆ ಪಟ್ಟಿ ಕೊಡಿ ಎಂದು ಕೇಳಿದರೆ ಈ ಉತ್ತರದಲ್ಲಿ ಯಾವ ಯಾವ ಹೆದ್ದಾರಿಗಳಲ್ಲಿ ಏನೇನಾಗಿದೆ ಎನ್ನುವುದನ್ನು ಹೇಳಿಲ್ಲ. ಸಾರಿಗೆ ಮತ್ತು ಸಂಪರ್ಕವನ್ನು ಉತ್ತಮಗೊಳಿಸಿ ರಾತ್ರಿ ವೇಳೆ ಹೆದ್ದಾರಿಗಳಲ್ಲಿ ಗಸ್ತುಗಳನ್ನು ಮಾಡಬಾಗಿದೆ ದರೋಡೆ ನಡೆಯಬಹುದು ಎಂದು ಶಂಕಿಸಲಾದ ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ಚಲಿಸುವ ನಾಲ್ಕು ಚಕ್ರ ವಾಹನಗಳನ್ನು ಗುಂಪು ಮಾಡಿ ಪೋಲೀಸ್ ರಕ್ಷಣೆಯಲ್ಲಿ ಕಳುಹಿಸಲಾಗುತ್ತಿದೆ. ವರ್ತಮಾನ ಪಡೆಯಲು ಮುಖ್ಯವಾದ ಹೆದ್ದಾರಿ ಸ್ಥಳಗಳಲ್ಲಿ ಮತ್ತು ಅಡಗು ಸ್ಥಳದಲ್ಲಿ ಗುಪ್ತ ಪೋಲೀಸ್ ಸಂಚು ವಿರ್ಪಡಿಸಲಾಗಿದೆ. ಅಪರಾಧ ಪತ್ತೆ ದಳದವರಿಂದ ದರೋಡೆ ವಿರೋಧಿಗಳನ್ನು ಪತ್ತೆ ಮಾಡಲು ದಳಗಳನ್ನು ವಿರ್ಪಡಿಸಿ ದರೊಡೆ ಪ್ರಕರಣಗಳಿಗೆ ಕ್ರಮ ಕೈಗೊಂಡಿದೆ ಎಲ್ಲಾ ಹಂತದ ಪೋಲೀಸ್ ಅಧಿಕಾರಿಗಳು ಸಭೆಗಳನ್ನು ವಿರ್ಪಡಿಸಿ ಅಪರಾಧಗಳ ವಿನಿಮಯ ಮಾಡಿಕೊಂಡಿದೆ. ಪೋಲೀಸ್ ಅಧಿಕಾರಿಗಳು ತೀರ್ವ ಕಾರ್ಯಚರಣೆ ಸಲ್ಲಿಸುವ ಸಲುವಾಗಿ ಕಂಟ್ರೋಲ್ ರೂಮ್‌ಗಳನ್ನು ಹೆಚ್ಚಿಸಲಾಗಿದೆ. ಈ ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ನೋಡಿಕೊಂಡು ಹೇಳಿದ್ದಾರೆ. ಆದರೆ ಕಳೆದ ತಿಂಗಳಲ್ಲಿ ಎಷ್ಟು ಪ್ರಕರಣಗಳಾಗಿವೆ ರಾಜ್ಯದ ಯಾವ ಯಾವ ಹೆದ್ದಾರಿಗಳಲ್ಲಿ ಆಗಿದೆ ಎನ್ನುವುದಕ್ಕೆ ಡೀಟೈಲ್ಸ್ ಕೊಟ್ಟಿಲ್ಲ ನಿನ್ನೆ ಕೂಡ ಪೇಪರ್‌ನಲ್ಲಿ ಬಂದಿದೆ ತಾವು ನೋಡಿರಬಹುದು ಹೊಸಕೋಟೆ ಬಳಿ ಸುಮಾರು 13 ಜನರಿಗೆ ಗಾಯಗಳಾಗಿದೆ ಎಂಟು ಜನರ ಬಂಧನ ಎಂದು ಹೇಳಿದ್ದಾರೆ.

ಈಗ ಏನಾಗಿರುವೆಯೆಂದರೆ ಗಂಡಸರಿಂದ ಹೆಚ್ಚಾಗಿ ರಾತ್ರಿ ಬಸ್ಸುಗಳಲ್ಲಿ ಹೆದ್ದಾರಿಗಳಲ್ಲಿ ದರೋಡೆಯಾಗುತ್ತಿದೆ. ಇದರಿಂದ ಹೆಣ್ಣುಮಕ್ಕಳು ರಾತ್ರಿ ವೇಳೆ ಬಸ್ಸಿನಲ್ಲಿ ಸಂಚಾರ ಮಾಡುವ ಹಾಗೇ ಇಲ್ಲ. ರಾತ್ರಿ ವೇಳೆ ದರೋಡೆ ಮಾಡುವಾಗ ಹೆಣ್ಣುಮಕ್ಕಳ ಮೈಮೇಲಿರುವ ಒಡವೆಗಳನ್ನು ಕಿತ್ತುಕೊಳ್ಳುತ್ತಾರೆ. ಆದ್ದರಿಂದ ನಾವುಗಳು ಇನ್ನು ಮುಂದೆ ಮರ್ಯಾದೆಯಿಂದ ಬಸ್ಸಿನಲ್ಲಿ ಓಡಾಡುವ ಹಾಗೆಯೇ ಇಲ್ಲ ಹಿಂದೆ ಶ್ರೀಮಾನ್ ದೇವರಾಜ ಅರಸುರವರು ಮುಖ್ಯ ಮಂತ್ರಿಗಳಾಗಿದ್ದಾಗ ನಾನು ಶಾಸಕಳಾಗಿದ್ದೆ ಆಗ ರಾತ್ರಿ ದರೋಡೆಗಳಿಗೆ ಕ್ರಮತೆಗೆದುಕೊಂಡಿದ್ದರು ಒಂದು ಸಾರಿ ಅರಸೀಕೆರೆ ಬಳಿಯಲ್ಲಿ ಹಾಸುಕಲ್ಲು ಸುರಿದು ದರೋಡೆಕಾರರು ತೀರಾ ಸುಲಿಗೆ ಮಾಡಿದರು. ಆ ಸಂದರ್ಭದಲ್ಲಿ ರಾತ್ರಿ ಸಂಚರಿಸುವ ಪ್ರತಿ ಬಸ್ಸುಗಳಲ್ಲಿ ಒಬ್ಬಿಬ್ಬರು ಪೋಲೀಸರಿಗೆ ಗನ್ ಕೊಟ್ಟು ಆ ಬಸ್ಸುಗಳಲ್ಲಿ ಸಂಚಾರ ಮಾಡಲಿಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅದನ್ನು ಈಗ ಮಾಡಿದರೆ ನಮಗೆ ಏನಾದರೂ ರಕ್ಷಣೆ ಸಿಗುತ್ತದೆಯೇ ವಿನಹ ಸುಮ್ಮನೆ ಈ ತರಹ ಉತ್ತರ ಕೊಟ್ಟರೆ ಪ್ರಯೋಜನವಾಗುವುದಿಲ ಎಲ್ಲೋ ಗನ್ ಹಿಡಿದುಕೊಂಡು ಸುತ್ತುತ್ತಿರುತ್ತಾರೆ. ಏನೋ ನಡೆಯುತ್ತದೆ. ಆದರೆ ಎಲ್ಲೋ ಒಂದು ಕಡೆ ಬಸ್ ನಿಲ್ಲಿಸಿ ದರೋಡೆ ಮಾಡಿದಾಗ ಯಾರು ರಕ್ಷಣೆಗೆ ಬರುತ್ತಾರೆ? ಗುಪ್ತ ದಳದವರಿಗೇನು ಇಂಥ ಕಡೆ ಬಸ್ ನಿಲ್ಲಿಸಿ ಇಂಥ ಕಡೆ ಕಾರ್ ನಿಲ್ಲಿಸಿ ದರೋಡೆ ಮಾಡುತ್ತಾರೆಂದು ಗೊತ್ತಿರುತ್ತದೆಯೇ? ಅವರಿಗೂ ಸಹ ಅಷ್ಟು ಸುಲಭವಾಗಿ ಮಾಹಿತಿ ದೊರೆಯುವುದಿಲ್ಲ ಆದುದರಿಂದ ಹಿಂದೆ ಎನು ವ್ಯವಸ್ಥೆ ಮಾಡುತ್ತಿದ್ದರೆಂದು ನಾನು ಹೇಳಿದೆನಲ್ಲಾ ರಾತ್ರಿ ಸಂಚಾರಿ ಬಸ್ಸುಗಳಲ್ಲಿ ಪೋಲೀಸರು ಗನ್ ಸಮೇತ ಇರುತ್ತಿದ್ದರೆಂದು ಆ ರೀತಿ ವ್ಯವಸ್ಥೆಯನ್ನು ಮಾಡಿ. ಇದಾಗದಿದ್ದರೆ ಬಸ್ಸಿನ ಕಂಡಕ್ಟರ್ ಮತ್ತು ಡ್ರೈವರ್‌ಗಳಿಗೆ ರಿವಲ್ವಾರ್ ಸಪ್ಲೈ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಅಧ್ಯಕ್ಷರು : ಕಂಡಕ್ಟರ್ ಡ್ರೈವರ್‌ಗಳಿಗೆ ರಿವಲ್ವಾರ್ ಕೊಟ್ಟರೆ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ : ಆದರೆ ಕೈಲಿ ಗನ್ ಕೊಟ್ಟರೆ ಚಾಲಕರಿಗೂ ಮತ್ತು ಪ್ರಯಾಣಿಕರಿಗೂ ಹೆಚ್ಚು ಕಡಿಮೆ ಮಾತುಕತೆಯಾದರೆ ಪರಿಸ್ಥಿತಿ ಚೆನ್ನಾಗಿರುವುದಿಲ್ಲ.

ಶ್ರೀ ಮತಿ ಮೋಟಮ್ಮ : ಅಧ್ಯಕ್ಷರೇ ಹಾಸ್ಯಾಸ್ಪದವಾಗಿ ತೆಗೆದುಕೊಳ್ಳುವಂತಹದಲ್ಲ ಇಮೀಡಿಯೇಟಾಗಿ ಬಸ್ ನಿಲ್ಲಿಸಿ ಅಟ್ಯಾಕ್ ಮಾಡುತ್ತಾರೆ.

ಅಧ್ಯಕ್ಷರು : ಕಂಡಕ್ಟರ್ ಕೈಗೆ ಪಿಸ್ತೂಲು ಕೊಡುವುದು ಬಹಳ ಗಂಭೀರವಾದಂಥ ವಿಚಾರ.

Smt. Motamma : Of course, not for all the conductors.

ಅಧ್ಯಕ್ಷರು : ರಾತ್ರಿ ಸಂಚಾರ ಮಾಡತಕ್ಕಂಥ ಪ್ರತಿಯೊಂದು ಬಸ್ಸುಗಳಲ್ಲಿ ಪೋಲೀಸ್ ಕೊಡತಕ್ಕಂಥ ಯೋಜನೆ ಸರ್ಕಾರದಲ್ಲಿ ಇದೆಯೇ ಎಂದು ಪ್ರಶ್ನೆ ಕೇಳಿ.

ಶ್ರೀಮತಿ ಮೋಟಮ್ಮ : ಕಂಡಕ್ಟರ್‌ಗಳಿಗೆ ಪಿಸ್ತೂಲು ಕೊಡುವುದು ಅಪಾಯಕರವೆಂದರೆ ಕೊನೆಯ ಪಕ್ಷ ರಾತ್ರಿ ವೇಳೆ ಹೆದ್ದಾರಿಯಲ್ಲಿ ಓಡಾಡುವ ಬಸ್‌ಗಳಲ್ಲಿ ಸಶಸ್ತ್ರ ಪೋಲೀಸರನ್ನು ಹಾಕಬೇಕೆಂದು ನಾನು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ

ಅಧ್ಯಕ್ಷರು : ಮಾಡುವುದಕ್ಕಾಗುತ್ತದೆಯೇ? ಇಲ್ಲವೋ ಎಂದು ಪ್ರಶ್ನೆ ಕೇಳಿ ಒತ್ತಾಯ ಮಾಡಬೇಡಿ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ ಶ್ರೀಮತಿ ಮೋಟಮ್ಮನವರು ಬಹಳ ಗಂಭೀರವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾತ್ರಿ ವೇಳೆ ಬಸ್‌ನಲ್ಲಿ ಸಂಚಾರ ಮಾಡುವ ಕಾಲದಲ್ಲಿ ಮಹಿಳೆಯರಿಗೆ ಯಾವ ರೀತಿ ತೊಂದರೆಯಾಗುತ್ತಿದೆ ಅದನ್ನು ನಿವಾರಣೆ ಮಾಡುವುದಕ್ಕೆ ಬಸ್‌ನಲ್ಲಿ ಪೋಲೀಸರನ್ನು ಹಾಕಬೇಕೆಂದು ಸಲಹೆ ಕೊಟ್ಟಿದ್ದಾರೆ ಇತ್ತೀಚೆಗೆ ಹೆದ್ದಾರಿಗಳಲ್ಲಿ ಏನು ದರೋಡೆಗಳು 3 ತಿಂಗಳಲ್ಲಿ ಆಗಿದೆ ಅವುಗಳ ಬಗ್ಗೆ ನಾನು ವಿವರಗಳನ್ನು ಕೊಟ್ಟಿದ್ದೇನೆ. ಬಳ್ಳಾರಿ ಬೀದರ್‌ನಲ್ಲಿ ಆದ ಬಗ್ಗೆ ಹೇಳಿದ್ದೇನೆ. ಮತ್ತೆ ಕೋಲಾರದಲ್ಲಿ ಕೂಡಾ ದರೋಡೆ ಆಗುತ್ತಿದ್ದು ಹಾಗೂ ಅಲ್ಲಿನ ಐ.ಜಿ. ಮತ್ತು ಡಿ.ಐ.ಜಿ.ಯವರು ಇವತ್ತು ಕೋಲಾರದಲ್ಲಿ ಸಭೆ ಸೇರಿದ್ದಾರೆ. ಇವತ್ತು ಅಂತರರಾಜ್ಯ ಡಕಾಯಿತರು ಏನು ಡಕಾಯಿತಿ ಮಾಡುತ್ತಿದ್ದಾರೆ ಅದರಲ್ಲಿ ಮುಜಾಫರ್‌ನಗರ ಮತ್ತು ಮೊನ್ನೆ ಕಾರವಾದಲ್ಲಿ ಏನು ಡಕಾಯಿತಿ ನಡೆಸಿದ್ದರು ಅದರಲ್ಲಿ 3 ಜನ ಬಿಹಾರದವರನ್ನು ಹಿಡಿಯಲಾಗಿದ್ದು 38 ಜನರ ಮೇಲೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಡಕಾಯಿತಿ ಮಾಡಲು ಅವರು ಹೊಸ ಹೊಸ ಟೆಕ್ನೀಗಳನ್ನು ಉಪಯೋಗಿಸುತ್ತಿದ್ದಾರೆ. ರಸ್ತೆಯಲ್ಲಿ ಮಳೆ ಹೊಡೆದು ಟೈರ್ ಪಂಚರ್ ಆಗುವಹಾಗೆ ಮಾಡಿ ವಾಹನಗಳ ದರೋಡೆ ಮಾಡುತ್ತಾರೆ. ಇಂತಹದ್ದು 82ರಲ್ಲಿ ಆಗುತ್ತಾ ಇತ್ತು. ಈ ಡಕಾಯಿತರು ಹೈಲಿ ಪ್ರೊಫೆಷನಲ್ಸ್ ಇದ್ದು ಈ ಬಗ್ಗೆ ಸರ್ಕಾರ ಕೂಡಾ ಗಮನಹರಿಸಿದೆ. ಮತ್ತೆ ಬಸ್‌ಗಳಲ್ಲಿ ಪೋಲೀಸರನ್ನು ಇಡಬೇಕೆನ್ನುವ ಸಲಹೆಯನ್ನು ಏನು ಕೊಟ್ಟಿದ್ದಾರೆ ಅದನ್ನು ಸರ್ಕಾರ ವಿಚಾರ ಮಾಡುತ್ತದೆ.

ಶ್ರೀಮತಿ ಮೋಟಮ್ಮ : ನಮ್ಮ ರಾಜ್ಯದಲ್ಲಿ ಆಗುವಷ್ಟು ದರೋಡೆಗಳು ಬೇರೆ ರಾಜ್ಯಗಳಲ್ಲಿ ಕಂಡುಬರುತ್ತಾ ಇಲ್ಲ ನಮ್ಮಲ್ಲೇ ಏಕೆ ಜಾಸ್ತಿ ಇದೆ?

ಶ್ರೀ ಧರ್ಮಸಿಂಗ್ : ಬೇರೆ ರಾಜ್ಯಗಳಲ್ಲೂ ಹೈಲಿ ಪ್ರೊಫೆಷನಲ್ಸ್ ಡಕಾಯಿತರು ಇದ್ದು ಅಲ್ಲಿಯೂ ರಸ್ತೆ ದರೋಡೆಗಳು ನಡೆಯುತ್ತಿವೆ. ನಮ್ಮ ರಾಜ್ಯದ ಬಾರ್ಡರ್ ಜಿಲ್ಲೆಗಳಾದ ಬಳ್ಳಾರಿ, ಬೀದರ್, ಗುಲ್ಬರ್ಗಾ ಮತ್ತು ಕೋಲಾರದಲ್ಲಿ ಸ್ವಲ್ಪ ಆಗುತ್ತಾ ಇತ್ತು ಆದರೆ ಕೋಲಾರದಲ್ಲಿ ಇತ್ತೀಚಿನ ದಿವಸಗಳಲ್ಲಿ ಹೆಚ್ಚಾಗಿದೆ. ಇದನ್ನು ನಿಯಂತ್ರಣ ಮಾಡತಕ್ಕ ರೀತಿಯಲ್ಲಿ ನಾವು ಕೆಲಸ ಮಾಡುತ್ತಾ ಇದ್ದೇವೆ.

ಮಂಗಳೂರಿನಲ್ಲಿ ಪ್ರಾದೇಶಿಕ ಪಾಸ್‌ಪೋರ್ಟ್ ಕಛೇರಿ

3162 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಂಗಳೂರಿನಲ್ಲಿ ಪ್ರಾದೇಶಿಕ ಪಾಸ್‌ಪೋರ್ಟ್ ಕಛೇರಿಯನ್ನು ತೆರೆಯಲು ಕೇಂದ್ರ ಸರ್ಕಾರವನ್ನು ಸರ್ಕಾರವು ಕೋರಿದೆಯೇ?

2) ಹಾಗಿದ್ದಲ್ಲಿ ಈ ಬಗೆಗೆ ಭಾರತ ಸರ್ಕಾರದ ಪ್ರತಿಕ್ರಿಯೆ ಏನು?

ಶ್ರೀ ಧರ್ಮಸಿಂಗ್ (ಗೃಹಸಚಿವರು) :

1) ಇಲ್ಲ

2) ಪ್ರಶ್ನೆ (1) ಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ ನಾವು ನಿರೀಕ್ಷಿಸಿದ ಉತ್ತರ ಇಲ್ಲಿ ಬಂದಿದೆ. ಕರಾವಳಿ ಭಾಗದಲ್ಲಿ ಹೆಚ್ಚಿನ ಜನರು ಗಲ್ಫ್ ಹಾಗೂ ಮತ್ತಿತರ ಕಡೆ ಹೆಚ್ಚು ಪ್ರಮಾಣದಲ್ಲಿ ಹೋಗುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಪಾಸ್‌ಪೋರ್ಟ್ ಆಫೀಸ್ ತೆರೆದರೆ ಉತ್ತಮವಾಗುತ್ತದೆಂದು ಜನರ ಬೇಡಿಕೆ ಇದೆ. ಅಲ್ಲದೇ ಎಲ್ಲಾ ವ್ಯವಹಾರ ಇಲ್ಲಿಂದ ಆಗಬೇಕಾದರೆ ಕನಿಷ್ಟ ಪಕ್ಷ 2 ತಿಂಗಳಾದರೂ ತಗಲುತ್ತದೆ. ಆದ್ದರಿಂದ 10-15 ದಿವಸಗಳ ಒಳಗೆ ಪಾಸ್‌ಪೋರ್ಟ್ ಸಿಗುವಹಾಗೆ ಏರ್ಪಾಡು ಮಾಡುವ ಸಲುವಾಗಿ ಮಂಗಳೂರಿನಲ್ಲಿ ಒಂದು ಪಾಸ್‌ಪೋರ್ಟ್ ಆಫೀಸ್ ತೆರೆದರೆ ಉತ್ತಮ ಎಂದು ನಾನು ಹೇಳುತ್ತೇನೆ.

ಶ್ರೀ ಧರ್ಮಸಿಂಗ್ : ಇದು ರಾಜ್ಯ ಸರ್ಕಾರಕ್ಕೆ ಬರುವುದಿಲ್ಲ ಮಾನ್ಯ ಸದಸ್ಯರ ಭಾವನೆಯನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿ ಆದಷ್ಟು ಬೇಗ ಈ ಬಗ್ಗೆ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಈಗ ಶ್ರೀ ಎಂ.ಪಿ. ವೆಂಕಟೇಶ್ ಅವರ ಪ್ರಶ್ನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ನಮಗೆ ಯಾವುದೇ ಪ್ರಶ್ನೆಗೂ ಇಲ್ಲಿ ಉತ್ತರ ಬಂದಿಲ್ಲ ಈ ಕಡೆಯ ಯಾವ ಸದಸ್ಯರಿಗೂ ಬಂದಿಲ್ಲ ಮತ್ತೆ ಪತ್ರಕರ್ತರಿಗೂ ಕೂಡಾ ಉತ್ತರ ಹೋಗಿಲ್ಲ. I seek your guidance in this.

ಅಧ್ಯಕ್ಷರು : ಸರ್ಕಾರದವರು ಉತ್ತರಗಳನ್ನು ಕಳುಹಿಸಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಬಗ್ಗೆ ಏನಾದರೂ ಸಂಪ್ರದಾಯ ಮಾಡಬೇಕು. ಸಂಸತ್ತಿನಲ್ಲಿ ಪ್ರಶ್ನೋತ್ತರ ಕಾಲಕ್ಕೆ ಒಂದು ಗಂಟೆ ಮುಂಚೆ ಉತ್ತರವನ್ನು ನೋಟೀಸ್ ಆಫೀಸಿನಲ್ಲಿ ಇಡುತ್ತಾರೆ. ಆದ್ದರಿಂದ ಸದಸ್ಯರಿಗೆ ತಮ್ಮ ಸಪ್ಲಿಮೆಂಟರಿಯನ್ನು ಹಾಕುವುದಕ್ಕೆ ಸಹಾಯವಾಗುತ್ತದೆ. ಆದರೆ ಇಲ್ಲಿ ಸದನಕ್ಕೆ ಬಂದಾಗ ಕೊಡುತ್ತಾರೆ. ಇಲ್ಲಿ ಉತ್ತರ ಬರದೇ ಇದ್ದರೆ ಸಪ್ಲಿಮೆಂಟರಿ ಕೇಳುವುದು ಹೇಗೆ?

ಅಧ್ಯಕ್ಷರು : ಈಗ ಬರುತ್ತಾ ಇದೆ.